ತಾವು ದೇಹಾತೀತರು ಎಂಬ ವೇದಾಂತದ ಸತ್ಯವು ಅವರ ಅನುಭವಕ್ಕೆ ಬಂದಿರಬೇಕು.

ಒಬ್ಬ ತ್ಯಾಗಿ, ಭಗವಂತನ ದೂತ, ಎಂತಹ ಪ್ರೇಮವನ್ನು ನೂರಾರು ಜೀವಿಗಳ ಮನದಲ್ಲಿ ತುಂಬಿದನು! ಡೇಮಿಯನ್ ನಮ್ಮನ್ನು ಪ್ರೀತಿಸುತ್ತಾನೆ. ಭಗವಂತ ನಮ್ಮನ್ನು ಪ್ರೀತಿಸುತ್ತಾನೆ ಎಂಬ ನಂಬಿಕೆ ಅವರ ಹೃದಯದಲ್ಲಿ ತುಂಬಿತು. ನಮಗಾಗಿ ಈ ಸತ್ಪುರುಷ ತನ್ನ ಜೀವನವನ್ನು ಅರ್ಪಿಸಿದ್ದಾನೆ, ನಾವೂ ಅವನು ಹೇಳಿದಂತೆ ಕೇಳೋಣ ಎಂಬ ನಂಬಿಕೆಯನ್ನು ತಮ್ಮ ಹೃದಯದಲ್ಲಿ ತುಂಬಿಕೊಂಡರು. ನಂತರ ಡೇಮಿಯನ್‌ನ ಕಾರ್ಯ ಸುಲಭವಾಯಿತು. ಅವರೆಲ್ಲರ ಹೃದಯಗಳಲ್ಲಿ ಭಗವಂತನಲ್ಲಿ ವಿಶ್ವಾಸ ಮೂಡುವಂತೆ ಮಾಡಿದ. ಅವರೆಲ್ಲರಿಗೂ ಮನೆಗಳನ್ನು ಕಟ್ಟಿಕೊಟ್ಟ, ಅವರ ಮಕ್ಕಳಿಗೆ ಶಾಲೆಗಳನ್ನು ತೆರೆದ. ಅವರ ಸುವ್ಯವಸ್ಥಿತ ಜೀವನಕ್ಕೆ ಬೇಕಾದ ಎಲ್ಲಾ ಏರ್ಪಾಡುಗಳನ್ನು ಮಾಡಿದ. ಅವರಿಗೆ ಮಾಡುತ್ತಿದ್ದ ಪ್ರತಿಯೊಂದು ಸೇವೆಯಲ್ಲೂ, ಭಗವಂತ ನಗುನಗುತ್ತಾ ತನ್ನ ಸೇವೆಯನ್ನು ಸ್ವೀಕರಿಸುವುದನ್ನು ಪ್ರತ್ಯಕ್ಷವಾಗಿ ಕಂಡ. ನಲಿವಿನಲ್ಲಿ ಕಾಣಸಿಗದ ತನ್ನ ಭಗವಂತ, ನೋವಿನಲ್ಲಿ ನೂರಾಗಿ, ಸಾವಿರವಾಗಿ ಕಣ್ಣು ಹರಿಸಿದಲ್ಲೆಲ್ಲಾ ಕಾಣಸಿಕ್ಕಿದ. ಧನ್ಯ ಡೇಮಿಯನ್‌ನ ಜೀವನ, ಯಾತನೆಯಲ್ಲೂ ಭಗವಂತನ ತಾಣವನ್ನು ಕಂಡ ಜೀವನ!

✡

# ಪುಸ್ತಕ ❀ ಪರಿಚಯ

**ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರು ಕಂಡಂತೆ**

**ಶ್ರೀಮಾತೆಯವರು**

**ಸಂಕಲನ: ಸ್ವಾಮಿ ರಾಘವೇಶಾನಂದ**

**ಪ್ರಕಾಶಕರು : ಅಧ್ಯಕ್ಷರು, ರಾಮಕೃಷ್ಣ ಮಠ,**

**ಸ್ವಾಮಿ ವಿವೇಕಾನಂದ ರಸ್ತೆ, ಹಲಸೂರು - ೫೬೦ ೦೦೮**

**ಪುಟ : ೫೬ ಬೆಲೆ : ರೂ ೩೦/-**

ಬೆಂಗಳೂರಿನ ಬಸವನಗುಡಿಯಲ್ಲಿರುವ ರಾಮಕೃಷ್ಣ ಮಠದ ಶತಮಾನೋತ್ಸವದ ಸಂದರ್ಭದಲ್ಲಿ ಈ ಕಿರುಹೊತ್ತಿಗೆಯ ಬಿಡುಗಡೆ ಆಯಿತು. ಆಂಗ್ಲ ಭಾಷೆ ಹಾಗೂ ಕನ್ನಡದಲ್ಲಿ ಪ್ರಕಟವಾಗಿರುವ ಈ ಪುಸ್ತಕವು ಶ್ರೀಮಾತೆಯ ಹಿರಿಯ ವ್ಯಕ್ತಿತ್ವ ಹಾಗೂ ಮಹಿಮೆಗೆ ಒಂದು ಕಿರುಗನ್ನಡಿ. ಪ್ರತಿಬಿಂಬವು ಮೂಲದ ವಿಶಾಲತೆಯನ್ನು, ಸೌಂದರ್ಯವನ್ನು, ತೇಜಸ್ಸನ್ನು ದೋಷವಿಲ್ಲದೆ ತೋರುವಂತೆ ಈ ಹೊತ್ತಿಗೆ ಶ್ರೀಮಾತೆಯನ್ನು ಸಮರ್ಪಕವಾಗಿ ಚಿತ್ರಿಸುತ್ತದೆ.

ಮಕ್ಕಳಿಗಿಂತ ತಾಯಿಯನ್ನು ಸಮರ್ಪಕವಾಗಿ ಅರಿಯಬಲ್ಲವರು ಯಾರಿದ್ದಾರೆ? ಇವರಾದರೋ ಸಾಮಾನ್ಯ ತಾಯಿಯಲ್ಲ, ಜಗಜ್ಜನನಿ. ಅವರನ್ನು ತಿಳಿಯಲು ವಿಶೇಷ ತಯಾರಿ ಬೇಕು. ಆಧ್ಯಾತ್ಮಿಕ ಸಾಧನೆಗಾಗಿ ಇಡೀ ಜೀವನವನ್ನೇ ಮುಡಿಪಾಗಿಟ್ಟಿದ್ದ, ಅದರಲ್ಲೂ ಈಶ್ವರ ಕೋಟಿಗಳು ಎಂದು ಕರೆಸಿಕೊಂಡ, ಶ್ರೀರಾಮಕೃಷ್ಣ ಪರಮಹಂಸರೊಂದಿಗೆ ಅವರ ಲೀಲೆಯಲ್ಲಿ ಭಾಗಿಗಳಾಗಲು ಜೊತೆಗೂಡಿ ಬಂದಿದ್ದ ೧೩ ಶಿಷ್ಯರು ಶ್ರೀಮಾತೆಯ ಬಗ್ಗೆ ಶ್ರದ್ಧಾಭಕ್ತಿಗಳಿಂದ ಹೇಳಿರುವ ನುಡಿಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಎನಿತೋ ಕಾಲದಿ ನಿನ್ನ ಬಳಿಯೆ ನಾನಿದ್ದರೂ
ನನ್ನ ಸೋಲನು ನಾನು ಒಪ್ಪಿಕೊಳ್ಳುವೆನೀಗ—
ಅರಿಯದಾದೆನೆ ನಿನ್ನ ಎಂದೆಂದಿಗೂ!

ಎಂದು ಸ್ವಾಮಿ ಶಾರದಾನಂದರು ನಮ್ರತೆಯಿಂದ ಬರೆದಿದ್ದರೂ ಕೂಡ ಈ ಶಿಷ್ಯರಿಗೆ ಶ್ರೀಮಾತೆಯವರ ದಿವ್ಯವ್ಯಕ್ತಿತ್ವದ ನಿಕಟ ಪರಿಚಯವಿತ್ತು ಎಂದು ತಿಳಿದುಬರುತ್ತದೆ.

"ನನಗೆ ಶ್ರೀರಾಮಕೃಷ್ಣರ ನಾಮಕ್ಕಿಂತ ಶ್ರೀಮಾತೆಯವರ ನಾಮಸ್ಮರಣೆ ಹೆಚ್ಚು ಶಕ್ತಿಯನ್ನು ಕೊಡುತ್ತದೆ" ಎನ್ನುವ ಸ್ವಾಮಿ ವಿಜ್ಞಾನಾನಂದರ ಭಕ್ತಿ ಒಂದೆಡೆಯಾದರೆ, "ಜಗನ್ಮಾತೆಯ ಕೃಪೆಗೆ ಹೋಲಿಕೆ ಎಲ್ಲಿದೆ!" ಎಂದು ಕೊಂಡಾಡುವ ಸ್ವಾಮಿ ಅದ್ಭುತಾನಂದರ ನುಡಿ ಮತ್ತೊಂದೆಡೆ. "ಶ್ರೀಮಾತೆಯವರ ಕೃಪೆ ದೊರೆತಿರುವವರು ಅರ್ಥ ಮಾಡಿಕೊಳ್ಳಬೇಕು, ಇದು ಹಲವಾರು ಜನ್ಮಗಳ ತಪಸ್ಸಿನ ಫಲ ಎಂದು. ಯಾವಾಗ ಶ್ರೀಮಾತೆಯವರು ನಿನ್ನ ಮೇಲೆ ಕೃಪೆ ತೋರಿದ್ದಾರೋ ಆಗಿನಿಂದಲೇ ನಿನ್ನ ವಿಧಿ ಬದಲಾಯಿಸಿದೆ ಎಂದು ತಿಳಿ" ಎನ್ನುವ ಸ್ವಾಮಿ ಸುಬೋಧಾನಂದರ ಪ್ರೇಮಾಭಕ್ತಿಗೆ ಭಕ್ತರ ಶಿರಗಳು ಮಣಿಯುವುವು.

ಶ್ರೀಮಾತೆ ಸ್ವತಃ ಮಹಾಮಾಯೆ. ಆಗೊಮ್ಮೆ ಈಗೊಮ್ಮೆ ಅನಿರೀಕ್ಷಿತವಾಗಿ ತಮ್ಮ ದಿವ್ಯತೆ, ಮಹಿಮೆಗಳ ಬಗ್ಗೆ ಹೇಳಿಬಿಡುತ್ತಿದ್ದರು. ಅತಿಸಾಮಾನ್ಯ ಮಹಿಳೆಯಂತೆ ಇರುವುದೇ ಅವರಿಗೆ ಪ್ರಿಯವಾಗಿತ್ತು. ಹಿರಿಯ ಆಸನವಿಲ್ಲ, ಆಡಂಬರದ ಅಲಂಕಾರಗಳಿಲ್ಲ, ಕಂಗೆಡಿಸುವ ಪ್ರಕಾಶವಿಲ್ಲ. ಎಲ್ಲವೂ ಮಾತೃವಾತ್ಸಲ್ಯದ ನೀರವತೆ, ಸರಳತೆಯಿಂದ ಆವೃತವಾಗಿತ್ತು. ಶ್ರೀಮಾತೆಯ ಚಿತ್ರಗಳೇ ಇದಕ್ಕೆ ಸಾಕ್ಷಿ. ಪುಸ್ತಕದಲ್ಲಿ ಶ್ರೀಮಾತೆ ಹುಟ್ಟಿದ ಸ್ಥಳ, ಬೇಲೂರು ಮಠದಲ್ಲಿರುವ ಅವರ ದೇವಸ್ಥಾನ, ದಕ್ಷಿಣೇಶ್ವರದಲ್ಲಿ ಅವರಿದ್ದ ಕೋಣೆ ಹಾಗೂ ಬೇರೆ ಬೇರೆ ಸಂದರ್ಭಗಳಲ್ಲಿ ತೆಗೆದಿರುವ ಅವರ ಚಿತ್ರಗಳನ್ನು ಮುದ್ರಿಸಿದ್ದಾರೆ. ವೈಶಿಷ್ಟ್ಯವೆಂದರೆ ಪ್ರತಿಯೊಂದು ಚಿತ್ರದ ಕೆಳಗೆ ಅದನ್ನು ತೆಗೆದ ಸ್ಥಳ, ಇಸವಿ ಮುಂತಾದ ವಿವರಗಳನ್ನು ನೀಡಲಾಗಿದೆ. ಚಿತ್ರಗಳನ್ನು ಸುಂದರವಾದ ಆರ್ಟ್ ಕಾಗದದ ಮೇಲೆ ಮುದ್ರಿಸಲಾಗಿದೆ. ಕಂಪ್ಯೂಟರ್ ಕೈಚಳಕದಿಂದ ಚಿತ್ರಗಳು ಹೆಚ್ಚು ಆಕರ್ಷಣೀಯವೆನಿಸಿದರೂ ಕೆಲವು ಭಾವಚಿತ್ರಗಳು ತಮ್ಮ ಅಸಲನ್ನು ಕಳೆದುಕೊಂಡಿವೆ ಎನಿಸದಿರುವುದಿಲ್ಲ. ನಿಸರ್ಗವು ಶ್ರೀಮಾತೆಯವರ ದಿವ್ಯತೆಯ ವಿರಾಟ್ ಅಭಿವ್ಯಕ್ತಿ ಎಂದು ತೋರಿಸಲೋ ಏನೋ ಎಂಬಂತೆ ಪ್ರಾಕೃತಿಕ ಸೌಂದರ್ಯವನ್ನು ಸೆರೆಹಿಡಿದಿರುವ ಕೆಲವು ಚಿತ್ರಗಳನ್ನು ಸೇರಿಸಲಾಗಿವೆ.

ಶ್ರೀಮಾತೆಯವರು ಬೆಂಗಳೂರಿಗೆ ಬಂದಿದ್ದಾಗ ಕಲ್ಲುಬಂಡೆಯ ಮೇಲೆ ಕುಳಿತು ಧ್ಯಾನ ಮಾಡಿದ್ದರು ಎಂಬ ವಿಷಯವನ್ನು ೩೭ನೇ ಪುಟದಲ್ಲಿ ನೀಡಿದ್ದಾರಾದರೂ ಆ ಸ್ಥಳದ ಚಿತ್ರ ಇದ್ದಿದ್ದರೆ ಸಮರ್ಪಕವಾಗುತ್ತಿತ್ತು. ಮೂರು, ನಾಲ್ಕು ಮುದ್ರಣ ದೋಷಗಳನ್ನು ಬಿಟ್ಟರೆ ಉಳಿದೆಲ್ಲ ರೀತಿಯಲ್ಲಿ ಪುಸ್ತಕವು ಚೆನ್ನಾಗಿ ಮೂಡಿ ಬಂದಿದೆ, ಹಾಗೂ ಶ್ರೀಮಾತೆಯವರನ್ನು ಅರಿತವರಲ್ಲಿ ಮೊದಲಿಗರಾದ ನೇರ ಶಿಷ್ಯರ ಅಭಿಪ್ರಾಯಗಳೆಲ್ಲ ಒಂದೇ ಕಡೆ ಸಂಗ್ರಹವಾಗಿರುವುದು ಸಾಧಕರಿಗೆ ಬಹು ಉಪಯುಕ್ತವಾಗಿದೆ. ಇಂತಹ ಅಮೂಲ್ಯ ಪುಸ್ತಕವನ್ನು ಇಷ್ಟು ಕಡಿಮೆ ಬೆಲೆಗೆ ಪ್ರಕಟಗೊಳಿಸಿದ ಸ್ವಾಮಿ ರಾಘವೇಶಾನಂದರಿಗೆ ಅಭಿನಂದನೆ ಸಲ್ಲಬೇಕು.

— ಕುಮಾರಿ ಸ್ವರ್ಣಗೌರಿ, ಮೈಸೂರು